ಕಾರ್ಮಿಕ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಗಳು.

2863:(3889)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ, ಶಾಸನ ರಚನೆ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು. ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಮಿಕ ನ್ಯಾಯಾಲಯಗಳಲ್ಲಿ 5ವರ್ಷಗಳಿಂದ ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಈ ಮೊಕದ್ದಮೆಗಳು ಇತ್ಯರ್ಥವಾಗದೇ ಬಾಕಿ ಉಳಿದಿರಲು ಕಾರಣಗಳೇನು?

ಇ) ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಸಚಿವರು):

ಅ) ಕಾರ್ಮಿಕ ನ್ಯಾಯಾಲಯಗಳಲ್ಲಿ 5 ವರ್ಷಗಳಿಂದ ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಗಳು ಈ ಕೆಳಕಂಡಂತೆ ಇರುತ್ತವೆ.

	ಜಿಲ್ಲೆ	ಬಾಕಿ ಉಳಿದಿರುವ ಪ್ರಕರಣಗಳು (ದಿ: 1-10-98ರಲ್ಲಿದ್ದಂತೆ)
1.	ಬೆಂಗಳೂರು	8034
2.	ಚಿಕ್ಕಮಂಗಳೂರು	527
3.	ಬಿಜಾಪುರ	422
4.	ಧಾರವಾಡ	2836
5.	ಗುಲ್ಬರ್ಗಾ	832
6.	ಕೊಡಗು	139
7.	ಮಂಗಳೂರು	1159
8.	ಮೈಸೂರು	2311
	ಒಟ್ಟು:	16260

ಆ) ಕಾರ್ಮಿಕ ನ್ಯಾಯಾಲಯಗಳಲ್ಲಿ ಹೆಚ್ಚಿನ ಕೆಲಸದ ಒತ್ತಡದಿಂದ ಮೊಕದ್ದಮೆಗಳು ಇತ್ಯರ್ಥವಾಗದೆ ಬಾಕಿ ಉಳಿದಿರುತ್ತವೆ.

ಇ) ಮೊಕದ್ದಮೆಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಕಾರ್ಮಿಕ ನ್ಯಾಯಾಲಯಗಳಿಗೆ ನಿರ್ದೇಶನ ನೀಡುವಂತೆ ಕರ್ನಾಟಕ ಉಚ್ಚ ನ್ಯಾಯಾಲಯವನ್ನು ಕೇಳಿ ಕೊಳ್ಳಲಾಗುವುದು.

ತುಂಗಾ ಮೇಲ್ದಂಡೆ ಯೋಜನೆಗೆ ಬೇಕಾಗಿರುವ ಅರಣ್ಯ ಭೂಮಿ.

2864:(3887)

ಶ್ರೀ ಕೆ.ಎನ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಮುಳುಗಡೆ ಆಗಲಿರುವ ಹಾಗೂ ಕಾಲುವೆಗೆ ಬೇಕಾದ ಅರಣ್ಯ ಜಮೀನು ಎಷ್ಟು?

ಆ) ಇದಕ್ಕೆ ಪರಿಹಾರವಾಗಿ ನೀರಾವರಿ ಇಲಾಖೆಯಿಂದ ಹಣ ತುಂಬಿದ್ದು ಯಾವಾಗ, ಬದಲಿ ಭೂಮಿಯನ್ನು ಯಾವಾಗ ನೀಡಲಾಗಿದೆ? (ಸ್ಥಳದ ವಿವರ ನೀಡುವುದು)

ಇ) ಇದುವರೆಗೆ ಅರಣ್ಯ ಭೂಮಿ ಹಸ್ತಾಂತರವಾಗದ ಕೆಲಸಕ್ಕೆ ತೊಂದರೆ ಆಗಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಹಸ್ತಾಂತರ ವಿಷಯ ಈಗ ಯಾವ ಹಂತದಲ್ಲಿದೆ?

ಉ) ಇದನ್ನು ಯಾವಾಗ ಹಸ್ತಾಂತರ ಮಾಡಲಾಗುವುದು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ತುಂಗಾ ಮೇಲ್ದಂಡೆ ಯೋಜನೆಗೆ ಬೇಕಾಗುವ ಅರಣ್ಯ ಜಮೀನಿನ ವಿವರ.

1) ತುಂಗಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾಗಲಿರುವುದು	-	427.29 ಹೆಕ್ಟೇರ್
2) ಕಾಲುವೆಗಾಗಿ	-	22.26 ಹೆಕ್ಟೇರ್
ಒಟ್ಟು	-	449.55 ಹೆಕ್ಟೇರ್